**ಡಿ.ಡಬ್ಲ್ಯು 3**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ** 13-06-2025

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಪ್ರತಿವಾದಿಪರ ಶ್ರೀ ಜೆ.ಡಿ.ಬಿ ವಕೀಲರಿಂದ,**

ಈ ಪ್ರಕರಣದಲ್ಲಿ ನಾನು 2ನೇ ಪ್ರತಿವಾದಿ ಪರ ಸಾಕ್ಷಿ ನುಡಿಯುತ್ತಿದ್ದೆನೆ. ಈಗ ತೋರಿಸುತ್ತಿರುವ ದಾಖಲೆಗಳಲ್ಲಿ ನನ್ನ ಸಹಿ ಎರಡು ಸಹಿಗಳು ಇರುತ್ತವೆ. ಸಾಕ್ಷಿ ತನ್ನ ಸಹಿಗಳನ್ನು ಗುರುತಿಸಿರುತ್ತಾರೆ. ಸದ್ರಿ ದಾಖಲೆ ನೊಂದಾಯಿತ ದಾನ ಪತ್ರ ಇದ್ದು ಅದನ್ನು ಈಗಾಗಲೇ ನಿಶಾನೆ ಡಿ-4 ಎಂದು ಗುರುತಿಸಲಾಗಿದೆ ಮತ್ತು ಸಾಕ್ಷಿ ಸಹಿಯನ್ನು ನಿಶಾನೆ-ಡಿ4(ಬಿ) ಮತ್ತು (ಸಿ) ಎಂದು ಗುರುತಿಸಲಾಗಿದೆ. ನನ್ನ ಸಮಕ್ಷಮ ನಿಶಾನೆ ಡಿ-4ಕ್ಕೆ ನಾಗಪ್ಪ ನಾಯ್ಕರವರು ಸಹಿ ಮಾಡಿರುತ್ತಾರೆ ಅವರ ಸಹಿಯನ್ನು ನಾನು ಗುರುತಿಸಿರುತ್ತೇನೆ. ನಿಶಾನೆ ಡಿ-4ರಲ್ಲಿ ತೋರಿಸಿರುವ ದಾಖಲೆಯಲ್ಲಿ ಸೋಮಯ್ಯ ನಾಯ್ಕ, ಹಿರಿಯಕ್ಕ ದುರ್ಗಪ್ಪ ನಾಯ್ಕ, ಮಾಸ್ತಿ ವೆಂಕಟೇಶ ನಾಯ್ಕ, ಮಂಜಮ್ಮ ಗಣಪತಿ ನಾಯ್ಕ, ಮಹದೇವಿ ಕೋಂ ಮಂಜುನಾಥ ನಾಯ್ಕ ಮತ್ತು ಪವನ ಕುಮಾರ ರಾಮಾ ನಾಯ್ಕ ಇವರ ಪೋಟೋಗಳು ಇರುತ್ತವೆ. ಸದ್ರಿ ದಾಖಲೆಗ ಅವರು ಹೆಬ್ಬೆಟ್ಟಿನ ಗುರುತು ಮತ್ತು ಸಹಿಯನ್ನು ಹಾಕಿರುತ್ತಾರೆ ಅದನ್ನು ನಾನು ನೋಡಿ ಗುರುತಿಸುರುತ್ತೇನೆ.

(ಈ ಹಂತದಲ್ಲಿ ವಾದಿ ಪರ ಮತ್ತು 14 ಮತ್ತು 16ನೇ ಪ್ರತಿವಾದಿ ಪರ ವಕೀಲರು ಪಾಟೀ ಸಮಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**